KACM710000292021

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

ಉಪಸ್ಥಿತರು
ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **5** ನೇ ಜೂನ್ **2026**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **10/2021**

ಫಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

**(**ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು**)**

**-**ವಿರುದ್ಧ**-**

ಆರೋಪಿ/ತರು ಃ

ಈಶ್ವರಪ್ಪ ಬಿನ್ ಲೇಟ್ ಗೋವಿಂದರೆಡ್ಡಿ, 50 ವರ್ಷ, ವ್ಯವಸಾಯಗಾರರು, ವಾಸಃ ಸುಣ್ಣದಹಳ್ಳಿ ಹುಲಿತಿಮ್ಮಾಪುರ ಗ್ರಾಮ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಬಿ.ಟಿ.ಕೆಂಚಪ್ಪ, ನ್ಯಾಯವಾದಿಗಳು.)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 29.06.2020 |
| 2 | ಅಪರಾಧ ವರದಿ ಮಾಡಿದ ದಿನಾಂಕ | 29.06.2020 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | -- |
| 4 | ಫಿರ್ಯಾದಿಯ ಹೆಸರು | ಶ್ರೀಮತಿ ರೇಣುಕ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 06.01.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 06.05.2026 |
| 7 | ಆರೋಪಿಸಲಾದ ಅಪರಾಧಗಳು | ಭಾ.ದ.ಸಂ.ಕಲಂ 504, 324, 323, 354, 506 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿ ನಿರಪರಾಧಿ |

KACM710000292021

ತೀರ್ಪು

ಲಿಂಗದಹಳ್ಳಿ ಆರಕ್ಷಕ ಉಪನಿರೀಕ್ಷಕರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 324, 323, 354 ಮತ್ತು 506 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

ದಿನಾಂಕ 29.06.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಹುಲಿತಿಮ್ಮಾಪುರ ಗ್ರಾಮದ ಜಮೀನಿಗೆ ಆಲೂಗಡ್ಡೆ ಹಾಕಲು ಚಾಸಾ-1 ಶ್ರೀಮತಿ ರೇಣುಕಾರವರು ಚಾಸಾ-4 ರಿಂದ 7 ರವರೊಂದಿಗೆ ಹೋಗಿ ಟ್ರಾಕ್ಟರ್ ನಿಂದ ಬೇಸಾಯ ಮಾಡುತ್ತಿರುವಾಗ ಆರೋಪಿಯು ಅಲ್ಲಿಗೆ ಬಂದು ಚಾಸಾ-1 ರವರಿಗೆ ಈ ಜಮೀನು ನನಗೆ ಸೇರಿದ್ದು ಯಾಕೆ ಬೇಸಾಯ ಮಾಡಿಸುತ್ತಿದ್ದೀರಿ ಎಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಾಗ ಚಾಸಾ-1 ರವರು ಯಾಕೆ ಬೈಯ್ಯುತ್ತಿದ್ದೀರಿ ಈ ಜಮೀನು ನಮಗೆ ಸೇರಿದ್ದು ಎಂದು ಕೇಳಿದ್ದಕ್ಕೆ ಆರೋಪಿಯು ಚಾಸಾ-1 ರವರ ಕೈಹಿಡಿದು ಎಳೆದಾಡಿ ಜಮೀನಿನಲ್ಲಿದ್ದ ಕಲ್ಲಿನಿಂದ ಚಾಸಾ-1 ರವರ ಬಲಗಾಲಿನ ತೊಡೆಗೆ ಹೊಡೆದು, ಕೈಗಳಿಂದ ತಳ್ಳಿ ಕೆಳಗೆ ಬೀಳಿಸಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ನೀವು ಹೇಗೆ ಆಲೂಗಡ್ಡೆ ಹಾಕುತ್ತೀರಿ ನಾನು ನೋಡಿಕೊಳ್ಳುತ್ತೇನೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಭಾರತೀಯ ದಂಡ ಪಕ್ರಿಯಾ ಸಂಹಿತೆ ಕಲಂ

207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 354, 324, 323 ಹಾಗೂ 506 ರಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ರಚಿಸಲಾಯಿತು. ಆರೋಪಿಯು ಆರೋಪಣೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ಸಾಕ್ಷಿದಾರರ ಪಟ್ಟಿಯಲ್ಲಿ ತೋರಿಸಿರುವ 12 ಸಾಕ್ಷಿದಾರರಲ್ಲಿ ಅಸಾ-1 ರಿಂದ 9 ರವರ ಸಾಕ್ಷ್ಯ ಮಾಡಿಸಿರುತ್ತಾರೆ ಹಾಗೂ 8 ದಾಖಲೆಗಳನ್ನು ಹಾಜರುಪಡಿಸಿ ನಿಪಿ-1 ರಿಂದ 8 ಎಂದು ಮತ್ತು ಮುದ್ದೆಮಾಲು-1 ನ್ನು ಗುರುತಿಸಿಕೊಂಡಿರುತ್ತಾರೆ.

5. ಅಭಿಯೋಜನೆ ಪರ ಸಾಕ್ಷಿದಾರರ ವಿಚಾರಣೆ ಮುಕ್ತಾಯಗೊಂಡ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿಯು ತನ್ನ ವಿರುದ್ಧದ ಹೇಳಿಕೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಅವರ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಗುರ್ತಿಸಿಕೊಂಡಿರುವುದಿಲ್ಲ.

6. ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾನೆ.

7. ಆರೋಪಿಯ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

KACM710000292021

1) ದಿನಾಂಕ 29.06.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಹುಲಿತಿಮ್ಮಾಪುರ ಗ್ರಾಮದ ಜಮೀನಿಗೆ ಆಲೂಗಡ್ಡೆ ಹಾಕಲು ಚಾಸಾ-1 ಶ್ರೀಮತಿ ರೇಣುಕಾರವರು ಚಾಸಾ-4 ರಿಂದ 7 ರವರೊಂದಿಗೆ ಹೋಗಿ ಟ್ರಾಕ್ಟರ್ ನಿಂದ ಬೇಸಾಯ ಮಾಡುತ್ತಿರುವಾಗ ಆರೋಪಿಯು ಅಲ್ಲಿಗೆ ಬಂದು ಚಾಸಾ-1 ರವರಿಗೆ ಈ ಜಮೀನು ನನಗೆ ಸೇರಿದ್ದು ಯಾಕೆ ಬೇಸಾಯ ಮಾಡಿಸುತ್ತಿದ್ದೀರಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

2) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಚಾಸಾ-1 ರವರು ಯಾಕೆ ಬೈಯ್ಯುತ್ತಿದ್ದೀರಿ ಈ ಜಮೀನು ನಮಗೆ ಸೇರಿದ್ದು ಎಂದು ಕೇಳಿದ್ದಕ್ಕೆ ಆರೋಪಿಯು ಚಾಸಾ-1 ರವರ ಕೈಹಿಡಿದು ಎಳೆದಾಡಿ ಚಾಸಾ-1 ರವರ ಮಾನಕ್ಕೆ ಧಕ್ಕೆಯನ್ನುಂಟು ಮಾಡಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 354 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

3) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯು ಜಮೀನಿನಲ್ಲಿದ್ದ ಕಲ್ಲಿನಿಂದ ಚಾಸಾ-1 ರವರ ಬಲಗಾಲಿನ ತೊಡೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

4) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯು ಚಾಸಾ-1 ರವರನ್ನು ಕೈಗಳಿಂದ ತಳ್ಳಿ ಕೆಳಗೆ ಬೀಳಿಸಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

5) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯು ಚಾಸಾ-1 ರವರಿಗೆ ನೀವು ಹೇಗೆ ಆಲೂಗಡ್ಡೆ ಹಾಕುತ್ತೀರಿ ನಾನು

ನೋಡಿಕೊಳ್ಳುತ್ತೇನೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

6) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತವೆ ಃ

ಅಂಶ - 1 ಃ ನಕಾರಾತ್ಮಕವಾಗಿ,

ಅಂಶ - 2 ಃ ನಕಾರಾತ್ಮಕವಾಗಿ,

ಅಂಶ - 3 ಃ ನಕಾರಾತ್ಮಕವಾಗಿ,

ಅಂಶ - 4 ಃ ನಕಾರಾತ್ಮಕವಾಗಿ,

ಅಂಶ - 5 ಃ ನಕಾರಾತ್ಮಕವಾಗಿ,

ಅಂಶ - 6 ಃ ಅಂತಿಮ ಆದೇಶದಂತೆ,

-ಃ ಕಾ ರ ಣ ಗ ಳು ಃ-

10. ಅಂಶ-**1** ರಿಂದ **5** ಃ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

11. ಅಭಿಯೋಜನೆಯು ಆರೋಪಿಯ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಪ್ರಕರಣದ ಪಿರ್ಯಾದುದಾರರು, ಗಾಯಾಳು ಹಾಗೂ ಮಹಜರು ಸಾಕ್ಷಿದಾರರಾದ ಚಾಸಾ-1/ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 26.06.2020 ರಂದು ಸಿದ್ದರಹಳ್ಳಿಯಲ್ಲಿರುವ ತಮ್ಮ ಜಮೀನಿನಲ್ಲಿ ತಾನು ಹಾಗೂ ತನ್ನ ಗಂಡ ಕೆಲಸ ಮಾಡುತ್ತಿರುವಾಗ ಆರೋಪಿ ತಮ್ಮ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿ ಇದು ನನ್ನ ಜಮೀನು ನೀವು ಕೆಲಸ ಮಾಡಬಾರದೆಂದು ತಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದು ತನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿ ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು

ತೆಗೆದುಕೊಂಡು ತನ್ನ ಸೊಂಟಕ್ಕೆ ಹೊಡೆದು ತಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ, ನಂತರ ಲಿಂಗದಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ತಾನು ಚಿಕಿತ್ಸೆ ಪಡೆದುಕೊಂಡು ಮರುದಿನ ತಮಗೆ ಜಮೀನಿನಲ್ಲಿ ಆಲೂಗೆಡ್ಡೆ ಹಾಕಲು ಅಡ್ಡಗಟ್ಟಿ ಬಿಟ್ಟಿರುವುದಿಲ್ಲ, ನಂತರ ತಾವು ಲಿಂಗದಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ, ತಾವು ದೂರು ಕೊಟ್ಟ ದಿನದಂದು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಮಹಜರು ಕ್ರಮವನ್ನು ಜರುಗಿಸಿರುತ್ತಾರೆ, ಪೊಲೀಸರು ತನ್ನ ಸಮಕ್ಷಮ ಒಂದು ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಅಸಾ-1 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 29.06.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಹುಲಿತಿಮ್ಮಾಪುರ ಗ್ರಾಮದ ಜಮೀನಿನಲ್ಲಿ ತಾನು ಚಾಸಾ-5, 6, 7 ರವರೊಂದಿಗೆ ಆಲೂಗೆಡ್ಡೆ ಹಾಕುತ್ತಿರುವಾಗ ಆರೋಪಿಯು ಜಮೀನಿನ ಹತ್ತಿರ ಬಂದು ಇನ್ನೊಮ್ಮೆ ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ.

12. ಪ್ರಕರಣದ ಸ್ಥಳ ಮತ್ತು ಅಮಾನತ್ತು ಮಹಜರು ಸಾಕ್ಷಿದಾರರಾದ ಚಾಸಾ-3/ ಅಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ್ಗೆ ಸುಮಾರು 5 ವರ್ಷಗಳ ಹಿಂದೆ ತಾನು ಸಿದ್ದರಹಳ್ಳಿ ಗ್ರಾಮದಲ್ಲಿ ಹೊಲದಲ್ಲಿ ಸಂಜೆ 05.00 ಗಂಟೆ ಪೊಲೀಸರು ಬಂದು ಗಲಾಟೆಯಾದ ವಿಚಾರವಾಗಿ ಮಹಜರು ಕ್ರಮವನ್ನು ಜರುಗಿಸಿ ಛಾಯಚಿತ್ರವನ್ನು ತೆಗೆದಿರುತ್ತಾರೆ, ಸದರಿ ದಾಖಲಾತಿಗೆ ತಾನು ಸಹಿ ಮಾಡಿರುವುದಿಲ್ಲ ಹಾಗೂ ಹೆಬ್ಬೆಟ್ಟನ್ನು ಸಹ ಹಾಕಿರುವುದಿಲ್ಲ, ತನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-2 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-2 ರವರು ತಮ್ಮ

ಪಾಟೀ ಸವಾಲಿನಲ್ಲಿ ದಿನಾಂಕ 30.06.2020 ರಂದು ಸಂಜೆ 05.00 ರಿಂದ 06.00 ಗಂಟೆ ಸಮಯದಲ್ಲಿ ಹುಲಿತಿಮ್ಮಾಪುರ ಗ್ರಾಮದ ಸಿದ್ದರಹಳ್ಳಿ ವಾಸಿ ನಾರಾಯಣಸ್ವಾಮಿರವರ ಹೊಲದಲ್ಲಿ ಪೊಲೀಸರು ಜರುಗಿಸಿದ ಮಹಜರಿಗೆ ಹೆಬ್ಬೆಟ್ಟನ್ನು ಹಾಕಿರುತ್ತೀರಾ ಎಂದರೆ ತನಗೆ ನೆನಪಿಲ್ಲ, ಆ ಸಂದರ್ಭದಲ್ಲಿ ಪೊಲೀಸರು ಒಂದು ಹಿಡಿಗಾತ್ರದ ಕಾಡುಜಾತಿಯ ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿ ಎಂದು ನುಡಿದಿರುತ್ತಾರೆ.

13. ಪ್ರಕರಣದ ಮತ್ತೋರ್ವ ಸ್ಥಳ ಮತ್ತು ಅಮಾನತ್ತು ಮಹಜರು ಸಾಕ್ಷಿದಾರರಾದ ಚಾಸಾ-2/ಅಸಾ-3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ್ಗೆ ಸುಮಾರು 5-6 ವರ್ಷಗಳ ಹಿಂದೆ ತಾನು ಸಿದ್ದರಹಳ್ಳಿ ಗ್ರಾಮದಲ್ಲಿ ಸಂಜೆ 04.00 ಗಂಟೆ ಸಮಯದಲ್ಲಿ ಪೊಲೀಸರು ಗಲಾಟೆಯ ವಿಚಾರವಾಗಿ ಮಹಜರು ಕ್ರಮ ಜರುಗಿಸಿದ್ದು, ಸದರಿ ಮಹಜರಿಗೆ ತಾನು ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ತಿಳಿದಿರುತ್ತದೆ, ತನ್ನ ಸಮಕ್ಷಮದಲ್ಲಿ ಪೊಲೀಸರು ಒಂದು ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

14. ಚಾಸಾ-5/ಅಸಾ-4 ರವರು ಪ್ರಸ್ತುತ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಐದು ವರ್ಷಗಳ ಹಿಂದೆ ತಾನು ಸಿದ್ದರಹಳ್ಳಿ ಗ್ರಾಮದಲ್ಲಿ ನಾರಾಯಣಸ್ವಾಮಿ ರವರ ಜಮೀನಿಗೆ ಹೋಗಿದ್ದಾಗ ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ತಾವು ಹೋಗುವಷ್ಟರಲ್ಲಿ ಚಾಸಾ-4 ಮತ್ತು ಆರೋಪಿ ಅಣ್ಣತಮ್ಮಂದಿರು ಆಗಿದ್ದು, ಜಗಳವಾಡುತ್ತಿದ್ದರು, ಚಾಸಾ-4 ಮತ್ತು ಆರೋಪಿ ಒಬ್ಬರಿಗೊಬ್ಬರು ಹಿಡಿದು ಹೊಡೆದಾಡಿಕೊಳ್ಳುತ್ತಿದ್ದರು, ಅವರು ಏಕೆ ಜಗಳವಾಡುತ್ತಿದ್ದರು ಎಂದು ತನಗೆ ತಿಳಿದಿರುವುದಿಲ್ಲ, ಈ ಪ್ರಕರಣದ ಸಂಬಂಧ ತನಗೆ ಬೇರೇನೂ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-4 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದಾಗಲು ಸಹ ಅಸಾ-4 ರವರು

ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗಳೆದು ತಾನು ಪೊಲೀಸರ ಮುಂದೆ ನಿಪಿ-5 ರಂತೆ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

15. ಚಾಸಾ-4/ಅಸಾ-5 ರವರು ಪ್ರಸ್ತುತ ಪ್ರಕರಣದ ಇನ್ಸೋರ್ವ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ತನ್ನ ಅಣ್ಣ, ಈಗ್ಗೆ ಸುಮಾರು ಐದು ವರ್ಷಗಳ ಹಿಂದೆ ಸಿದ್ದರಹಳ್ಳಿ ಗ್ರಾಮದಲ್ಲಿ ಸರ್ವೆ ನಂ.39 ರಲ್ಲಿ ತಾವು ಆಲೂಗೆಡ್ಡೆ ಹಾಕುತ್ತಿದ್ದಾಗ ಆರೋಪಿಯು ಏಕಾಏಕಿ ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಅಲೂಗೆಡ್ಡೆ ಹಾಕಬೇಡಿ ಎಂದು ಜಗಳ ಮಾಡಿ ಕೆಲಸ ನಿಲ್ಲಿಸಿರುತ್ತಾರೆ, ಆರೋಪಿಯ ಮೇಲೆ ತಾನು ಮರುದಿನ ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಅಸಾ-5 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-5 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 29.06.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಹುಲಿತಿಮ್ಮಾಪುರ ಗ್ರಾಮದ ಸರ್ವೆ ನಂ.39 ರಲ್ಲಿನ ತಮ್ಮ ಜಮೀನಿಗೆ ಅಲೂಗೆಡ್ಡೆ ಹಾಕಲು ಟ್ರಾಕ್ಟರ್ ನಲ್ಲಿ ಉಳುಮೆ ಮಾಡುತ್ತಿದ್ದಾಗ ಆರೋಪಿ ಅತಿಕ್ರಮ ಪ್ರವೇಶ ಮಾಡಿ ತನಗೂ ಹಾಗೂ ಚಾಸಾ-1 ರವರಿಗೆ ಅಲೂಗೆಡ್ಡೆ ಹಾಕಬೇಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿ, ಚಾಸಾ-1 ರವರಿಗೆ ಆರೋಪಿ ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿ, ಅವರನ್ನು ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತಾರೆಂದರೆ ಸರಿ, ಗಲಾಟೆಯನ್ನು ತಾನು ಹಾಗೂ ಕೂಲಿ ಕೆಲಸಕ್ಕೆ ಬಂದವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿ, ಆರೋಪಿ ತನಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ, ತಾನು ತನ್ನ ಹೆಂಡತಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆಂದರೆ ಸರಿ ಎಂದು ನುಡಿದಿರುತ್ತಾರೆ.

16. ಚಾಸಾ-5/ಅಸಾ-6 ರವರು ಪ್ರಸ್ತುತ ಪ್ರಕರಣದ ಇನ್ಸೋರ್ವ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಐದು ವರ್ಷಗಳ ಹಿಂದೆ ಸಿದ್ದರಹಳ್ಳಿ ಗ್ರಾಮದಲ್ಲಿ ಸರ್ವೆ ನಂ.39 ರಲ್ಲಿ ಆಲೂಗೆಡ್ಡೆ ಹಾಕಲು ತಮ್ಮನ್ನು

ಕೆಲಸಕ್ಕೆ ಕರೆದಿದ್ದು, ತಾವು ಹೋಗುವಷ್ಟರಲ್ಲಿ ಚಾಸಾ-4 ಮತ್ತು ಆರೋಪಿ ಜಗಳ ಮಾಡಿಕೊಳ್ಳುತ್ತಿದ್ದು, ಅವರು ಏಕೆ ಜಗಳ ಮಾಡಿಕೊಳ್ಳುತ್ತಿದ್ದರು ಎಂದು ತಮಗೆ ತಿಳಿದಿರುವುದಿಲ್ಲ, ಈ ಪ್ರಕರಣದ ಬಗ್ಗೆ ತನಗೆ ಬೇರೆ ಯಾವುದೇ ವಿಚಾರ ಗೊತ್ತಿಲ್ಲ, ತಾನು ಯಾವುದೇ ಘಟನೆಯನ್ನು ಕಣ್ಣಾರೆ ಕಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-6 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದಾಗಲು ಸಹ ಅಸಾ-6 ರವರು ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗಳೆದು ತಾನು ಪೊಲೀಸರ ಮುಂದೆ ನಿಪಿ-6 ರಂತೆ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

17. ಪ್ರಸ್ತುತ ಪ್ರಕರಣದ ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ತನಿಖಾಧಿಕಾರಿಗಳಾದ ಚಾಸಾ-12/ಅಸಾ-7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-11 ರವರು ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲೆ ಮಾಡಿ ನಂತರ ಭಾಗಶಃ ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ, ನಂತರದಲ್ಲಿ ತಾನು ಈ ಪ್ರಕರಣದಲ್ಲಿ ದಿನಾಂಕ 28.07.2020 ರಂದು ರೇಣುಕಾರವರ ಸಿಆರ್.ಪಿ.ಸಿ. ಕಲಂ 164 ರಡಿ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದುಕೊಂಡು ನಂತರ ದಿನಾಂಕ 05.08.2020 ರಂದು ಚಾಸಾ-9 ರವರಿಂದ ಚಾಸಾ-1 ರವರ ಗಾಯದ ದೃಢೀಕರಣ ಪತ್ರವನ್ನು ಪಡೆದುಕೊಂಡು, ದಿನಾಂಕ 05.08.2020 ರಂದು ಆರೋಪಿ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷಾರೋಪಣಾ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

18. ಗಾಯಾಳುವಿಗೆ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಯಾದ ಚಾಸಾ-9/ಅಸಾ-8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 29.06.2020 ರಂದು ಮಧ್ಯಾಹ್ನ 01.30 ಗಂಟೆ ಸಮಯದಲ್ಲಿ ಚಾಸಾ-1 ರವರು ಹಲ್ಲೆಯ ವಿಚಾರವಾಗಿ ಲಿಂಗದಹಳ್ಳಿಯ

ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆ ಪಡೆಯಲು ಬಂದಿದ್ದು, ತಾನು ಚಾಸಾ-1 ರವರನ್ನು ಪರೀಕ್ಷೆ ಮಾಡಿದಾಗ ಚಾಸಾ-1 ರವರ ಬಲತೊಡೆಯಲ್ಲಿ ನೋವಿನ ಅನುಭವ ಇತ್ತು, ತನ್ನ ಅಭಿಪ್ರಾಯದಲ್ಲಿ ಮೇಲ್ಕಂಡ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ತಾನು ನಿಪಿ-7 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

19. ಪ್ರಸ್ತುತ ಪ್ರಕರಣದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಭಾಗಶಃ ತನಿಖೆಯನ್ನು ಕೈಗೊಂಡ ತನಿಖಾಧಿಕಾರಿಗಳಾದ ಚಾಸಾ-11/ಅಸಾ-9 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 29.06.2020 ರಂದು ತಾನು ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ಎಸ್.ಹೆಚ್.ಓ. ಕರ್ತವ್ಯದಲ್ಲಿದ್ದಾಗ ತನಗೆ ಲಿಂಗದಹಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಮಾಹಿತಿ ಬಂದ ಮೇರೆಗೆ ತಾನು ಲಿಂಗದಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಗಾಯಾಳು ತನ್ನ ಸಮಕ್ಷಮದಲ್ಲಿ ಹೇಳಿದಂತೆ ದಿನಾಂಕ 29.06.2020 ರಂದು 02.00 ಗಂಟೆಯಿಂದ 02.30 ರವರೆಗೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ನಂತರ ಗಾಯಾಳುವಿಗೆ ಓದಿ ಹೇಳಿ ಅವರ ಸಹಿ ಪಡೆದುಕೊಂಡು ಠಾಣೆಗೆ 02.45 ಗಂಟೆಗೆ ಬಂದು ಠಾಣಾ ಮೊಕದ್ದಮೆ ಸಂಖ್ಯೆ 83/2020 ಐಪಿಸಿ ಕಲಂ 447, 504, 354, 323, 324, 506 ಅಡಿಯಲ್ಲಿ ಕೇಸನ್ನು ದಾಖಲಿಸಿ ಆರೋಪಿಯ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಕೊಂಡಿರುತ್ತೇನೆ. ದಿನಾಂಕ 30.06.2020 ರಂದು ಚಾಸಾ-10 ಹಾಗೂ ತಾನು ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ಬಗ್ಗೆ ಮಾಹಿತಿ ತಿಳಿಸಿ ಪಂಚರಾಗಿ ಬರಮಾಡಿಕೊಂಡು ಅವರಿಗೆ ನೋಟೀಸ್ ಜಾರಿ ಮಾಡಿ ಅವರ ಸಮಕ್ಷಮದಲ್ಲಿ 04.45 ರಿಂದ 05.30 ರವರೆಗೆ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ, ನಂತರ ಪಂಚರ ಸಮಕ್ಷಮ ಚಾಸಾ-1 ರವರು ತೋರಿಸಿದ ಒಂದು ಹಿಡಿ ಗಾತ್ರದ ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ, ನಂತರ ಠಾಣೆಗೆ ಬಂದು ಠಾಣಾ ಪಿ.ಎಫ್. ನಂ.58/2020 ರಲ್ಲಿ ಸದರಿ ಮುದ್ದೆಮಾಲನ್ನು ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ನಂತರ

ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-12 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

20. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿರುವ ಎಲ್ಲಾ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 26.06.2020 ರಂದು ಸಿದ್ದರಹಳ್ಳಿಯಲ್ಲಿರುವ ತಮ್ಮ ಜಮೀನಿನಲ್ಲಿ ತಾನು ಹಾಗೂ ತನ್ನ ಗಂಡ ಕೆಲಸ ಮಾಡುತ್ತಿರುವಾಗ ಆರೋಪಿ ತಮ್ಮ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿ ಇದು ನನ್ನ ಜಮೀನು ನೀವು ಕೆಲಸ ಮಾಡಬಾರದೆಂದು ತಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದು ತನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿ ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ತನ್ನ ಸೊಂಟಕ್ಕೆ ಹೊಡೆದು ತಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿದ್ದು, ಹಾಗೂ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ ದಿನಾಂಕ 29.06.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಹುಲಿತಿಮ್ಮಾಪುರ ಗ್ರಾಮದ ಜಮೀನಿನಲ್ಲಿ ತಾನು ಚಾಸಾ-5, 6, 7 ರವರೊಂದಿಗೆ ಆಲೂಗೆಡ್ಡೆ ಹಾಕುತ್ತಿರುವಾಗ ಆರೋಪಿಯು ಜಮೀನಿನ ಹತ್ತಿರ ಬಂದು ಇನ್ನೊಮ್ಮೆ ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ನುಡಿದಿದ್ದು, ನಂತರ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಆರೋಪಿ ತನ್ನ ಗಂಡನ ಅಣ್ಣ ಆಗಬೇಕು, ಆರೋಪಿಗೂ ಹಾಗೂ ತಮಗೂ ಜಮೀನಿನ ವಿಚಾರವಾಗಿ ಸಿವಿಲ್ ವ್ಯಾಜ್ಯಗಳು ಮಾನ್ಯ ಹೈ ಕೋರ್ಟ್ ನಲ್ಲಿ ಬಾಕಿ ಇರುತ್ತದೆ ಎಂದರೆ ಸರಿ, ತಾವು ಉಳುಮೆ ಮಾಡುತ್ತಿರುವ ಜಮೀನು ತನ್ನ ಗಂಡನ ತಂದೆ ತಮಗೆ ನೀಡಿರುತ್ತಾರೆ, ತಮ್ಮ ಹಾಗೂ ಆರೋಪಿಯ ಮಧ್ಯೆ ತರೀಕೆರೆಯ ಮಾನ್ಯ ಹಿರಿಯ ನ್ಯಾಯಾಲಯದಲ್ಲೂ ಸಹ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಅಸಾ-5 ರವರು ಅಸಾ-1 ರವರ ಪತಿಯಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ತನ್ನ ಅಣ್ಣ, ಈಗ್ಗೆ ಸುಮಾರು ಐದು ವರ್ಷಗಳ ಹಿಂದೆ ಸಿದ್ದರಹಳ್ಳಿ ಗ್ರಾಮದಲ್ಲಿ ಸರ್ವೆ ನಂ.39 ರಲ್ಲಿ ತಾವು ಆಲೂಗೆಡ್ಡೆ ಹಾಕುತ್ತಿದ್ದಾಗ

ಆರೋಪಿಯು ಏಕಾಏಕಿ ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಅಲೂಗೆಡ್ಡೆ ಹಾಕಬೇಡಿ ಎಂದು ಜಗಳ ಮಾಡಿ ಕೆಲಸ ನಿಲ್ಲಿಸಿರುತ್ತಾರೆ, ಆರೋಪಿಯ ಮೇಲೆ ತಾನು ಮರುದಿನ ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ ಎಂದು ನುಡಿದಿದ್ದು, ನಂತರ ಅಸಾ-5 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಂದರೆ ಆರೋಪಿಯು ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ತನಗೂ ಹಾಗೂ ಚಾಸಾ-1 ರವರಿಗೆ ಅಲೂಗೆಡ್ಡೆ ಹಾಕಬೇಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1 ರವರಿಗೆ ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿ, ಅವರನ್ನು ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತಾರೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ, ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ತನ್ನ ಹಾಗೂ ತನ್ನ ಅಣ್ಣನಾದ ಆರೋಪಿಯ ಮಧ್ಯೆ ಇದೇ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸರಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲೂ ಸಹ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸರಿ, ಖಾತೆಯನ್ನು ಆರೋಪಿಯ ಹೆಸರು ಹೊರತುಪಡಿಸಿ ತಾವು ಮಾತ್ರ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ತನ್ನ ತಂದೆ ಮಾಡಿರುತ್ತಾರೆ, ಘಟನೆಯಾದ ದಿನಾಂಕ ತನಗೆ ನೆನಪಿಲ್ಲ, ತನಗೂ ಹಾಗೂ ತನ್ನ ಅಣ್ಣನಿಗೂ ಆಸ್ತಿ ವಿಚಾರವಾಗಿ ಮನಸ್ತಾಪ ಇದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

21. ಆರೋಪಿ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಆರೋಪಿ ಮತ್ತು ಅಸಾ-1 ರವರ ನಡುವೆ ಸಿವಿಲ್ ವಾಜ್ಯಗಳು ಇತ್ಯರ್ಥಕ್ಕೆ ಬಾಕಿ ಇದ್ದು, ಆ ಕಾರಣ ಸದರಿಯವರು ನಡುವೆ ದ್ವೇಷವಿದ್ದು, ಸದರಿ ದ್ವೇಷದ ವಿಚಾರವಾಗಿ ಅಸಾ-1 ರವರು ಆರೋಪಿಯ ವಿರುದ್ಧ ಈ ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುತ್ತಾರೆ, ಆದರೆ ಆರೋಪಿಯು ಯಾವುದೇ ತಪ್ಪನ್ನು ಮಾಡಿರುವುದಿಲ್ಲ, ಆದ್ದರಿಂದ ಅವರನ್ನು ಬಿಡುಗಡೆ ಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ. ಅಸಾ-1 ಮತ್ತು 5 ರವರ ಸಾಕ್ಷ್ಯವನ್ನು ಗಮನಿಸಿದಾಗ ಅಸಾ-1 ಮತ್ತು 5 ರವರು ಪತಿ ಪತ್ನಿಯಾಗಿದ್ದು,

ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಜಮೀನಿನ ವಿಚಾರವಾಗಿ ತಮ್ಮ ಹಾಗೂ ಆರೋಪಿಯ ಮಧ್ಯೆ ಸಿವಿಲ್ ನ್ಯಾಯಾಲಯಗಳಲ್ಲಿ ಹಾಗೂ ಮಾನ್ಯ ಹೈ ಕೋರ್ಟ್ ನಲ್ಲಿ ಸಿವಿಲ್ ವ್ಯಾಜ್ಯಗಳು ಇತ್ಯರ್ಥಕ್ಕೆ ಬಾಕಿ ಇರುತ್ತದೆ, ಆ ಕಾರಣ ತಮ್ಮ ಹಾಗೂ ಆರೋಪಿಯ ಮಧ್ಯೆ ಆಸ್ತಿ ವಿಚಾರವಾಗಿ ಮನಸ್ತಾಪ ಇದೆ ಎಂದು ಒಪ್ಪಿಕೊಂಡಿರುವುದನ್ನು ಗಮನಿಸಿದಾಗ ಆರೋಪಿ ಮತ್ತು ಅಸಾ-1 ಮತ್ತು 5 ರವರ ನಡುವೆ ಸಿವಿಲ್ ಪ್ರಕರಣಗಳು ಇರುವುದು ಹಾಗೂ ಸದರಿಯವರ ನಡುವೆ ದ್ವೇಷವಿರುವುದು ಮತ್ತು ದ್ವೇಷವಿರುವ ಕಾರಣ ಅಸಾ-1 ರವರು ಆರೋಪಿಯ ವಿರುದ್ಧ ಪ್ರಸ್ತುತ ಕ್ರಿಮಿನಲ್ ಪ್ರಕರಣ ದಾಖಲಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

22. ಈ ಪ್ರಕರಣದಲ್ಲಿ ಗಮನಿಸಬೇಕಾದ ಅತಿ ಮುಖ್ಯ ಅಂಶವೇನೆಂದರೆ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಅಸಾ-4 ಮತ್ತು 6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾವು ಜಮೀನಿಗೆ ಹೋಗುವಷ್ಟರಲ್ಲಿ ಚಾಸಾ-4 ಮತ್ತು ಆರೋಪಿ ಜಗಳವಾಡುತ್ತಿದ್ದರು ಹಾಗೂ ಒಬ್ಬರಿಗೊಬ್ಬರು ಹಿಡಿದು ಹೊಡೆದಾಡಿಕೊಳ್ಳುತ್ತಿದ್ದರು, ಅವರು ಏಕೆ ಜಗಳವಾಡುತ್ತಿದ್ದರು ಎಂದು ತಮಗೆ ತಿಳಿದಿರುವುದಿಲ್ಲ, ಈ ಪ್ರಕರಣದ ಸಂಬಂಧ ಬೇರೇನೂ ತಿಳಿದಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಅಭಿಯೋಜಕರು ಸದರಿಯವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗಲೂ ಸಹ ಸದರಿಯವರ ಸಾಕ್ಷ್ಯದಲ್ಲಿ ಅಭಿಯೋಜನೆಗೆ ಪೂರಕವಾಗಿ ಯಾವುದೇ ಅಂಶಗಳನ್ನು ಹೊರತೆಗೆಯಲು ವಿಫಲರಾಗಿರುತ್ತಾರೆ. ಆದ್ದರಿಂದ ಮೇಲ್ಕಂಡ ಅಸಾ-4 ಮತ್ತು 6 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗಲಾರದು ಹಾಗೂ ಪ್ರಕರಣಕ್ಕೆ ಹಿನ್ನಡೆಯನ್ನುಂಟು ಮಾಡುತ್ತದೆ ಎಂದು ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಇನ್ನೂ ಮುಖ್ಯವಾದ ಅಂಶವೇನೆಂದರೆ ಅಸಾ-6 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ತನಗೂ ಹಾಗೂ ತನ್ನ ಅಣ್ಣನಾದ ಆರೋಪಿಯ ಮಧ್ಯೆ ಇದೇ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ಬಾಕಿ

ಇದೆ ಎಂದರೆ ಸರಿ ಹಾಗೂ ಮಾನ್ಯ ಉಚ್ಛ ನ್ಯಾಯಾಲಯದಲ್ಲೂ ಸಹ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸರಿ, ಖಾತೆಯನ್ನು ಆರೋಪಿಯ ಹೆಸರು ಹೊರತುಪಡಿಸಿ ತಾವು ಮಾತ್ರ ಮಾಡಿಕೊಂಡಿರುತ್ತೇವೆ ಎಂದರೆ ತನ್ನ ತಂದೆ ಮಾಡಿರುತ್ತಾರೆ, ಘಟನೆಯಾದ ದಿನಾಂಕ ತನಗೆ ನೆನಪಿಲ್ಲ, ತನಗೂ ಹಾಗೂ ತನ್ನ ಅಣ್ಣನಿಗೂ ಆಸ್ತಿ ವಿಚಾರವಾಗಿ ಮನಸ್ತಾಪ ಇದೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಮೇಲ್ಕಂಡ ಅಸಾ-6 ರವರ ಸಾಕ್ಷ್ಯವನ್ನು ಗಮನಿಸಿದಾಗ ಸಹ ಅಭಿಯೋಜನೆಯ ಪ್ರಕರಣದ ಬಗ್ಗೆ ಸಂಶಯವುಂಟಾಗುತ್ತದೆ.

23. ಇನ್ನೂ ಹಲ್ಲೇ ಪ್ರಕರಣದಲ್ಲಿ ಸ್ಥಳ ಮಹಜರನ್ನು ಸಂಶಯಾತೀತವಾಗಿ ರುಜುವಾತು ಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯ ಮೇಲೆ ಇರುತ್ತದೆ. ಅಸಾ-2 ಮತ್ತು 3 ರವರು ಈ ಪ್ರಕರಣದ ಮಹಜರು ಸಾಕ್ಷಿದಾರರಾಗಿದ್ದು ಅಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ್ಗೆ ಸುಮಾರು 5 ವರ್ಷಗಳ ಹಿಂದೆ ತಾನು ಸಿದ್ದರಹಳ್ಳಿ ಗ್ರಾಮದಲ್ಲಿ ಹೊಲದಲ್ಲಿ ಸಂಜೆ 05.00 ಗಂಟೆ ಪೊಲೀಸರು ಬಂದು ಗಲಾಟೆಯಾದ ವಿಚಾರವಾಗಿ ಮಹಜರು ಕ್ರಮವನ್ನು ಜರುಗಿಸಿ ಛಾಯಚಿತ್ರವನ್ನು ತೆಗೆದಿದ್ದು, ಸದರಿ ದಾಖಲಾತಿಗೆ ತಾನು ಸಹಿ ಮಾಡಿರುವುದಿಲ್ಲ ಹಾಗೂ ಹೆಬ್ಬೆಟ್ಟನ್ನು ಸಹ ಹಾಕಿರುವುದಿಲ್ಲ, ತನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ನಂತರ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ ತಾನು ನಿಪಿ-2 ರ ಮಹಜರಿಗೆ ಹೆಬ್ಬೆಟ್ಟನ್ನು ಹಾಕಿರುವ ಬಗ್ಗೆ ತನಗೆ ನೆನಪಿಲ್ಲ, ಆ ಸಂದರ್ಭದಲ್ಲಿ ಪೊಲೀಸರು ಒಂದು ಹಿಡಿಗಾತ್ರದ ಕಾಡುಜಾತಿಯ ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿ ಎಂದು ನುಡಿದಿರುತ್ತಾರೆ. ಅಸಾ-3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ್ಗೆ ಸುಮಾರು 5-6 ವರ್ಷಗಳ ಹಿಂದೆ ತಾನು ಸಿದ್ದರಹಳ್ಳಿ ಗ್ರಾಮದಲ್ಲಿ ಸಂಜೆ 04.00 ಗಂಟೆ ಸಮಯದಲ್ಲಿ ಪೊಲೀಸರು ಗಲಾಟೆಯ ವಿಚಾರವಾಗಿ ಮಹಜರು ಕ್ರಮ ಜರುಗಿಸಿದ್ದು, ಸದರಿ ಮಹಜರಿಗೆ ತಾನು ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ತಿಳಿದಿರುತ್ತದೆ, ತನ್ನ ಸಮಕ್ಷಮದಲ್ಲಿ

ಪೊಲೀಸರು ಒಂದು ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿದ್ದು, ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಮಹಜರಿಗೆ ಸಹಿ ಹಾಕಿದ ದಿನಾಂಕ ತನಗೆ ನೆನಪಿಲ್ಲ, ಪೊಲೀಸರು ಮಹಜರಿನಲ್ಲಿ ಬರೆದಿರುವ ವಿಚಾರವನ್ನು ತನಗೆ ಓದಿ ತಿಳಿಸಿರುವುದಿಲ್ಲ, ಅಸಾ-1 ತನ್ನ ಸ್ವಂತ ತಂಗಿ ಎಂದು ನುಡಿದಿರುತ್ತಾರೆ. ಮೇಲ್ಕಂಡ ಅಸಾ-2 ಮತ್ತು 3 ರವರ ಮುಖ್ಯ ವಿಚಾರಣೆ ಹಾಗೂ ಪಾಟೀ ಸವಾಲಿನ ಅಂಶಗಳನ್ನು ಗಮನಿಸಿದಾಗ ಸದರಿಯವರ ಸಾಕ್ಷ್ಯವು ಅನೇಕ ದ್ವಂದ್ವತೆಗಳಿಂದ ಕೂಡಿರುತ್ತದೆ. ಅದೂ ಅಲ್ಲದೆ ಅಸಾ-1 ರವರು ಅಸಾ-3 ರವರ ಸ್ವಂತ ತಂಗಿ ಆಗಿದ್ದು, ಆದ್ದರಿಂದ ಅಸಾ-3 ರವರು ಸ್ವಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿರುತ್ತಾರೆ. ಆದ್ದರಿಂದ ನಿಪಿ-2 ರ ಮಹಜರನ್ನು ಅಭಿಯೋಜನೆಯವರು ನಿಸ್ಸಂಶಯತೀತವಾಗಿ ರುಜುವಾತು ಪಡಿಸಲು ವಿಫಲವಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತೇನೆ.

24. ಅಸಾ-8 ರವರು ವೈದ್ಯಾಧಿಕಾರಿಗಳಾಗಿದ್ದು ಸದರಿಯವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.06.2020 ರಂದು ಮಧ್ಯಾಹ್ನ 01.30 ಗಂಟೆ ಸಮಯದಲ್ಲಿ ಅಸಾ-1 ರವರು ಹಲ್ಲೆಯ ವಿಚಾರವಾಗಿ ಲಿಂಗದಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆ ಪಡೆಯಲು ಬಂದಿದ್ದು, ತಾನು ಚಾಸಾ-1 ರವರನ್ನು ಪರೀಕ್ಷೆ ಮಾಡಿದಾಗ ಅಸಾ-1 ರವರ ಬಲತೊಡೆಯಲ್ಲಿ ನೋವಿನ ಅನುಭವ ಇತ್ತು, ತನ್ನ ಅಭಿಪ್ರಾಯದಲ್ಲಿ ಮೇಲ್ಕಂಡ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ತಾನು ನಿಪಿ-7 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಅಸಾ-8 ರವರು ತಮ್ಮ ಪಾಟೀ ಸವಾಲಿನಲ್ಲಿ ಜಮೀನಿನಲ್ಲಿ ಕೆಲಸ ಮಾಡುವ ಸಮಯದಲ್ಲಿ ಜಾರಿ ಬಿದ್ದರೆ ನಿಪಿ-7 ಗಾಯದ ಪ್ರಮಾಣ ಪತ್ರದಲ್ಲಿ ತೋರಿಸಿರುವ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಇರಬಹುದು ಎಂದು ನುಡಿದಿರುತ್ತಾರೆ. ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯು ಒಂದು ಕಲ್ಲನ್ನು ತೆಗೆದುಕೊಂಡು ತನ್ನ ಸೊಂಟಕ್ಕೆ ಹೊಡೆದು ತಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿದ್ದು, ಆದರೆ ವೈದ್ಯಾಧಿಕಾರಿಗಳಾದ ಅಸಾ-8 ರವರು ಅಸಾ-1 ರವರ ಬಲತೊಡೆಯಲ್ಲಿ ನೋವಿನ ಅನುಭವ ಇತ್ತು ಎಂದು ನುಡಿದಿದ್ದು, ಹಾಗೂ ಸದರಿಯವರು

ನೀಡಿದ ನಿಪಿ-7 ರ ಗಾಯದ ಪ್ರಮಾಣ ಪತ್ರದಲ್ಲಿ ಸಹ ತೊಡೆಯ ಮಧ್ಯ ಭಾಗದಲ್ಲಿ ಊತವಾಗಿರುವ ಬಗ್ಗೆ ಉಲ್ಲೇಖ ಮಾಡಿರುತ್ತಾರೆ. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೇನೆಂದರೆ ಒಂದು ವೇಳೆ ಆರೋಪಿಯು ಅಸಾ-1 ರವರ ಮೇಲೆ ಕಲ್ಲಿನಿಂದ ಹಲ್ಲೆ ಮಾಡಿದ್ದೇ ಆದಲ್ಲಿ ಅಸಾ-1 ರವರಿಗೆ ರಕ್ತ ಬರುವ ಗಾಯವುಂಟಾಗಬೇಕಾಗಿದ್ದು, ಆದರೆ ಅಸಾ-1 ರವರಿಗೆ ಆ ರೀತಿಯ ಯಾವುದೇ ರಕ್ತಗಾಯವಾಗಿರುವ ಬಗ್ಗೆ ನಿಪಿ-7 ರ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಇರುವುದಿಲ್ಲ. ಸದರಿ ಅಂಶವು ಸಹ ಅಭಿಯೋಜನೆಯ ಪ್ರಕರಣಕ್ಕೆ ಹಿನ್ನಡೆಯನ್ನುಂಟು ಮಾಡುತ್ತದೆ.

25. ಅಸಾ-9 ರವರು ಪ್ರಸ್ತುತ ಪ್ರಕರಣದಲ್ಲಿ ಅಸಾ-1 ರವರ ಹೇಳಿಕೆ ಪಡೆದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ಭಾಗಶಃ ತನಿಖೆಯನ್ನು ಕೈಗೊಂಡ ಬಗ್ಗೆ ನುಡಿದಿದ್ದು ಹಾಗೂ ಅಸಾ-7 ರವರು ತನಿಖೆಯನ್ನು ಪೂರೈಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ. ಮೇಲೆ ಚರ್ಚಿಸಿದ ಕಾರಣಗಳಿಂದಾಗಿ ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಿದ ಭಾರತೀಯ ದಂಡ ಸಂಹಿತೆ ಕಲಂ 504, 354, 324, 323 ಹಾಗೂ 506 ರಡಿಯಲ್ಲಿನ ಒಳಾಂಶಗಳನ್ನು ನಿಸ್ಸಂಶಯತೀತವಾಗಿ ಸಾಬೀತುಪಡಿಸಲು ವಿಫಲವಾಗಿರುತ್ತಾರೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಆರೋಪಿಯು ಬಿಡುಗಡೆಗೆ ಅರ್ಹರೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಅಂಶ-1 ರಿಂದ 5 ನ್ನು ನಕಾರಾತ್ಮಕ ಎಂದು ಉತ್ತರಿಸಿರುತ್ತೇನೆ.

26. <u>ಅಂಶ - **6** ಃ</u> ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

-ಃ <u>ಆದೇಶ</u> ಃ-

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆ

ಕಲಂ 504, 354, 324, 323 ಹಾಗೂ 506 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿಯ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ .

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರೆಗೆ ಊರ್ಜಿತವಾಗಿರುತ್ತದೆ.

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಮುದ್ದೆಮಾಲು-1 ಬೆಲೆ ಬಾಳದ ವಸ್ತುವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸುವಂತೆ ಈ ಮೂಲಕ ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 5 ನೇ ಜೂನ್ 2026 ರಂದು ಘೋಷಿಸಲಾಯಿತು)

ಸಹಿ

**(ಊರ್ಮಿಳ.ವಿ.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

## ಅನುಬಂಧ

ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

| | | |
|---|---|---|
| ಅಸಾ-1 | ಃ | ಶ್ರೀಮತಿ ರೇಣುಕಮ್ಮ |
| ಅಸಾ-2 | ಃ | ಷಣ್ಮುಗಪ್ಪ |
| ಅಸಾ-3 | ಃ | ಮಂಜುನಾಥ |
| ಅಸಾ-4 | ಃ | ಶ್ರೀಮತಿ ಪಾರ್ವತಿ |
| ಅಸಾ-5 | ಃ | ನಾರಾಯಣಸ್ವಾಮಿ |
| ಅಸಾ-6 | ಃ | ಶ್ರೀಮತಿ ವಸಂತಮ್ಮ |
| ಅಸಾ-7 | ಃ | ಲೊಕೇಶಪ್ಪ |

KACM710000292021

ಅಸಾ-8 ಃ ಡಾಃ ಐಶ್ವರ್ಯ
ಅಸಾ-9 ಃ ರಾಜೇಶ್.ಎಸ್.

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

ನಿಪಿ-1 ಃ ದೂರು
ನಿಪಿ-2 ಃ ಮಹಜರು
ನಿಪಿ-3, 4 ಃ ಛಾಯಚಿತ್ರಗಳು
ನಿಪಿ-5 ಃ ಅಸಾ-4 ರವರ ಹೇಳಿಕೆ
ನಿಪಿ-6 ಃ ಅಸಾ-6 ರವರ ಹೇಳಿಕೆ
ನಿಪಿ-7 ಃ ಗಾಯದ ಪ್ರಮಾಣ ಪತ್ರ
ನಿಪಿ-8 ಃ ಪ್ರಥಮ ವರ್ತಮಾನ ವರದಿ

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು ಃ-</u>

ಮುದ್ದೆಮಾಲು-1 ಃ ಕಲ್ಲು

<u>ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

- ಇಲ್ಲ -

<u>ಆರೋಪಿತರ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

- ಇಲ್ಲ -

ಸಹಿ

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.